Sericulture Crop in Karnataka

145. SRI D.T. MAYANNA (Huliyurdurga).—Will the Minister for Finance & Tourism be pleased to state.—

(a) the extent of land where Mysore Seed Cocoon is grown in Karnataka State; (Talukwise information in acres may be given);

(b) the total production of Seed Cocoon and unutilised Cocoon (Talukwise information in Kilograms may be given);

(c) the average cost per KG of Seed Cocoon and the Unutilized Cocoon; (Mysore race seed cocoon);

(d) the average cost per KG of Cross Breed Cocoons and Bivoltine Silk Cocoons;

(e) whether it is proposed by Government to grow "Mysore Race Seed" in other parts of Karnataka;

(f) whether it is a fact that Government has laid down any rules restricting not to grow cross breed Cocoons in the areas where Mysore Race Seed is grown?

SRI M. VEERAPPA MOILY (Minister for Finance and Tourism).—

(a) The extend of land where Mysore race Seed is grown 7388.09 acres. Details are noted hereunder.—

1.	Kunigal Taluk	...	3860.12 Acres.
2.	Tumkur Taluk	...	697.00 Acres.
3.	Magadi Taluk	...	2830.37 Acres.

(b) Details are noted hereunder.—

		Seed Cocoon	Unutilised Cocoon
1.	Kunigal Taluk	3,50,998 Kg	3,97,998 Kg
2.	Tumkur Taluk	74,845 Kg	45,637 Kg
3.	Magadi Taluk	2,23,312 Kg	2,37,996 Kg

(c) Mysore Breed (from 10-6-1981) ... Rs. 30/-
Silk Reeling Cocoons ... Rs. 12.67

(d) The rates which were prevailing during the year 1980-81 were as follows.—

1.	Cross Breed	...	Rs. 23.51 per Kg
2.	Bivoltine	...	Rs. 30.47 per Kg

(e) No.

(f) Yes.

ಶ್ರೀ ಡಿ. ಟಿ. ಮಾಯಣ್ಣ.—ಸ್ವಾಮಿ, ಕುಣಿಗಲ್ ತಾಲ್ಲೂಕು, ತುಮಕೂರು ತಾಲ್ಲೂಕು ಮತ್ತು ಮಾಗಡಿ ತಾಲ್ಲೂಕಿನಲ್ಲಿ ಎಷ್ಟು ಎಕರೆ ಜಮೀನಿನಲ್ಲಿ ಮೈಸೂರು ತಳಿ ರೇಷ್ಮೆ ಗೂಡು ಬೆಳೆಯು ತ್ತಾರೆ ಎಂಬುದನ್ನು ಹೇಳಿದ್ದೀರಿ. ಒಟ್ಟು ಮೂರು ತಾಲ್ಲೂಕುಗಳಲ್ಲಿ ಬೆಳೆಯುವ ರೇಷ್ಮೆ ಗೂಡಿನಲ್ಲಿ ಅರ್ಧ ಭಾಗ ರೀಲಿಂಗ್‌ಗೆ ಹೋಗುತ್ತದೆ. ಇನ್ನರ್ಧ ಭಾಗ ಮಾತ್ರ ಸೀಡ್‌ಗೆ ತೆಗೆದುಕೊಳ್ಳುತ್ತೀರಿ. ಮೈಸೂರು ತಳಿಗೆ ಜೂನ್‌ನಿಂದ ೩೦ ರೂಪಾಯಿನಂತೆ ಫಿಕ್ಸ್ ಮಾಡಿದ್ದೀರಿ. ಬಿಚ್ಚುವ ನೂಲಿಗೆ ೧೨ ರೂಪಾಯಿ ಮಾಡಿದ್ದೀರಿ. ಬೈ ಒಲ್ಟೀನ್‌ಗೆ ಒಂದು ಕೆ. ಜಿ. ಗೆ ೩೦ ರೂಪಾಯಿ ಚಿಲ್ಲರೆ ಇದೆ. ಮಿಶ್ರ ತಳಿಗೆ ೨೩ ರೂಪಾಯಿ ಚಿಲ್ಲರೆ ಇದೆ. ೧೨ ರೂಪಾಯಿ ಸಿಲ್ಕ್ ರೀಲಿಂಗ್ ಕಕೂನ್‌ಗೆ ಇದೆ ಗೂಡಿಗೆ ಅನಾವಶ್ಯಕವಾಗಿ ರೈತರಿಗೆ ಹೆಚ್ಚು ಖರ್ಚಾಗುತ್ತದೆ. ಕಾನೂನು ಪ್ರಕಾರ ಮಿಶ್ರ ತಳಿ ಅಥವಾ ಬೇರೆ ಬೆಳೆಯುವುದಕ್ಕೆ ಅವಕಾಶವಿಲ್ಲ. ೧೨ ರೂಪಾಯಿ ಆ ಗೂಡಿಗೆ ಮಾಡಿದರೆ ರೈತ ಜೀವನ ಮಾಡುವುದಕ್ಕೆ ಆಗುತ್ತದೆಯೇ ? ಆದ್ದರಿಂದ ಸರ್ಕಾರದಿಂದ ದುಡ್ಡು ಕೊಟ್ಟು ಅನುಕೂಲ ಮಾಡಿಕೊಡುತ್ತೀರಾ ಎಂದು ಕೇಳುತ್ತಿದ್ದೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಅಧ್ಯಕ್ಷರೇ, ಬಿತ್ತನೆಗಾಗಿ ರೇಷ್ಮೆ ಗೂಡು ಉತ್ಪಾದನೆ ಮಾಡುವ ಬೆಳೆಗಾರರಿಗೆ ಇನ್ನೂ ಹೆಚ್ಚಿನ ಉತ್ತೇಜನ ಮತ್ತು ಸೌಲಭ್ಯ ಕೊಡಬೇಕೆಂದು ಈಗಾಗಲೇ ಸರ್ಕಾರ ಆಲೋಚನೆ ಮಾಡುತ್ತಿದೆ. ೧೦-೬-೮೧ ರಿಂದ ಒಂದು ಕೆ. ಜಿ. ಬಿತ್ತನೆ ಗೂಡಿಗೆ ಅಥವಾ ಒಂದು ಸಾವಿರ ಮೈಸೂರು ತಳಿ ಬಿತ್ತನೆ ಗೂಡಿನ ಬೆಲೆಯನ್ನು ೩೦ ರೂಪಾಯಿಗಳಿಗೆ ಮತ್ತು ೧ ಕೆ. ಜಿ. ೮೫೦ ಬಿತ್ತನೆ ಗೂಡನ್ನು ತೂಗುವ ಹೊಸ ಮೈಸೂರು ತಳಿ ಬಿತ್ತನೆ ಗೂಡಿಗೆ ೩೫ ರೂಪಾಯಿಗಳಿಗೆ ಹೆಚ್ಚಿಸಿದ್ದೇವೆ. ಇನ್ನೂ ಹೆಚ್ಚಿನ ಸವಲತ್ತನ್ನು ಅವರಿಗೆ ಕೊಡಬೇಕಾದ ಅವಶ್ಯಕತೆ ಇದೆ ಎಂಬುದರಲ್ಲಿ ಸರ್ಕಾರಕ್ಕೆ ಅನುಮಾನ ಇಲ್ಲ. ಈ ಬಗ್ಗೆ ಇನ್ನೂ ಹೆಚ್ಚಿನ ಸೌಲಭ್ಯ ಕೊಡಬೇಕೆಂದು ಸರ್ಕಾರ ಅಂದಾಜು ಮಾಡಿ ಕಾರ್ಯಕ್ರಮ ತೆಗೆದುಕೊಳ್ಳುತ್ತದೆ.

ಶ್ರೀ ಡಿ. ಟಿ. ಮಾಯಣ್ಣ.—ನಾವು ಬೆಳೆಯುವ ಗೂಡಿನಲ್ಲಿ ಅರ್ಧ ಭಾಗ ರೀಲಿಂಗ್‌ಗೆ ಹೋಗುತ್ತದೆ. ರೈತರಿಗೆ ಜೀವನ ಮಾಡುವುದಕ್ಕೆ ಕಷ್ಟವಾಗುತ್ತದೆ. ಆದ್ದರಿಂದ ಬೋನಸ್ ರೂಪದಲ್ಲಾಗಲೀ ಅಥವಾ ಬೇರೆ ರೀತಿಯಲ್ಲಾಗಲೀ ಒಂದು ಕೆ. ಜಿ. ಗೆ ಇಷ್ಟು ದುಡ್ಡು ಎಂದು ಕೊಡುವ ಬಗ್ಗೆ ಸರ್ಕಾರ ಎಷ್ಟು ದಿವಸದಲ್ಲಿ ತೀರ್ಮಾನ ತೆಗೆದುಕೊಳ್ಳುತ್ತದೆ ಎನ್ನುವ ಬಗ್ಗೆ ಆಶ್ವಾಸನೆ ಕೊಡುತ್ತೀರಾ ?

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಅಧ್ಯಕ್ಷರೇ, ಈಗ ಲೇಯಿಂಗ್ಸನ್ನು ಇಳಿಸಿದ ದರಗಳಲ್ಲಿ ಕೊಡಬೇಕಾದ ಕಾರ್ಯಕ್ರಮ ಇದೆ. ಅದೇರೀತಿ supply of chemicals free of cost for disinfection and disinfection of rearing houses have to be done. ಚಂದ್ರಿಕೆಯನ್ನು ಸಬ್ಸಿಡೈಸ್ಡ್ ರೇಟಿನಲ್ಲಿ ಕೊಡುವ ಕಾರ್ಯಕ್ರಮ, ಇಂಟರೆಸ್ಟ್ ಫೀ ಲೋನ್, ವಾರ್ ಮೆಷ್ ಕೊಡುವುದು ಮುಂತಾದ ಕಾರ್ಯಕ್ರಮ ಇದೆ. ಇನ್ನೂ ಅನೇಕ ಸವಲತ್ತು ಗಳನ್ನು ಕೊಟ್ಟು ಹೆಚ್ಚಿನ ಲಾಭ ಅವರಿಗೆ ಬರುವಹಾಗೆ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಡಿ. ಟಿ. ಮಾಯಾಣ್ಣ.—ಬೆಳೆಗೆ ರೋಗ ತಗುಲದಂತೆ ಕಾರ್ಯಕ್ರಮ ಹಾಕಿಕೊಂಡಿದ್ದಾರೆ. ಅದರಂತೆ ಅನುಕೂಲ ಮಾಡಿಕೊಡುತ್ತೀರಿ. ಆದರೆ ನನ್ನ ಪ್ರಶ್ನೆ ಏನೆಂದರೆ ಅರ್ಧ ಭಾಗ ಗೂಡು ರೀಲಿಂಗ್‌ಗೆ ಹೋಗುತ್ತದೆ, ಅದು ೧೨ ರೂಪಾಯಿನಂತೆ ಮಾರಾಟವಾಗುತ್ತದೆ, ಬೇರೆಯದು ೨೦, ೩೦, ೪೦, ೫೦ ರೂಪಾಯಿಗೆ ಬೇರೆ ಕಡೆ ಹೋಗುತ್ತದೆ, ಆದ್ದರಿಂದ ರೈತರಿಗೆ ತೊಂದರೆಯಾಗುತ್ತಿದೆ ಎನ್ನುವುದು. ರೈತನ ಅಭಿವೃದ್ಧಿಯಾಗಬೇಕು. ಈ ಕೈಗಾರಿಕೆ ಅಭಿವೃದ್ಧಿಯಾಗಬೇಕು ಎಂದು ಆ ಪ್ರದೇಶ ದಲ್ಲಿ ಬೇರೆ ತಳಿ ಬೆಳೆಯುವುದಕ್ಕೆ ಅವಕಾಶ ಕೊಡದೇ ಇರುವುದರಿಂದ ರೈತರಿಗೆ ನಷ್ಟವಾಗುತ್ತಿದ್ದು ಅವರಿಗೆ ಏನಾದರೂ ಅನುಕೂಲ ಮಾಡಿಕೊಡುತ್ತೀರಾ ? ಬೇರೆ ಸ್ಕೀಂ ಪ್ರಕಾರ ಬೇರೆ ಬೇರೆ ಅನುಕೂಲ ಮಾಡಿಕೊಡುವುದು ಬೇರೆ ವಿಚಾರ. ಆದರೆ ನಷ್ಟವಾಗಿರುತ್ತಿರುವ ರೈತರಿಗೆ ಏನು ಅನುಕೂಲ ಮಾಡಿ ಕೊಡುತ್ತೀರಿ ಎಂಬುದನ್ನು ಹೇಳಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಸದಸ್ಯರು ಯಾವ ಒಂದು ಸಮಸ್ಯೆಯನ್ನು ಮುಂದಿಟ್ಟಿದ್ದಾರೆ, ಕುಣಿಗಲ್‌ನಲ್ಲಿ ಫಿಲೇಚರ್ ಯೂನಿಟ್ ಅನ್ನು ಸ್ಥಾಪನೆ ಮಾಡಿದರೆ I thirk the reeling cacoons could hike up the prices. ಆ ವಿಚಾರದಲ್ಲಿ ನಾವು ಆಲೋಚನೆ ಮಾಡುತ್ತಿದ್ದೇವೆ.

ಶ್ರೀ ಡಿ. ಟಿ. ಮಾಯಣ್ಣ.—ಅಲ್ಲಿ ಇಲಾಖೆಯವರು ಏನು ಹೇಳುತ್ತಾರೆಂದರೆ ಬೇರೆ ಗೂಡುಗಳು ಬರುವದರಿಂದ ರೋಗ ತಗಲುತ್ತದೆ, ಆದ್ದರಿಂದ ರೋಗರಹಿತ ಪ್ರದೇಶದಲ್ಲಿ ಇರಬೇಕು ಎಂದು ಹೇಳುತ್ತಾರೆ. ರೈತರಿಗೆ ಬೋನಸ್ ರೂಪದಲ್ಲಿ ಧನಸಹಾಯ ಮಾಡುವುದಕ್ಕೆ ಸರ್ಕಾರದವರು ಆಲೋಚನೆ ಮಾಡುತ್ತಾರೆಯೇ?

ಶ್ರೀ ಎಂ. ವೀರಪ್ಪ ಮೊಯಿಲಿ. — ಈ ಸೂಚನೆಯನ್ನು ಆಲೋಚನೆ ಮಾಡುತ್ತೇವೆ.

Chilling Centre at Mandya City

182 SRI M. S. ATMANANDA (Mandya).—Will the Minister for Law and Parliamentary Affairs and Veterinary and Animal Husbandry be pleased to state:—

(a) whether it is a fact that Chilling Centre at Mandya City has not been completed yet ;

(b) if so, the reasons for the delay ;

(c) the time required for the completion ?

SRI Y. RAMAKRISHNA.—(Minister for Law and Parliamentary Affairs and Veterinary and Animal Husbandry)

(a,b, and c) There is already a Chilling Unity at Mandya with a capacity of 9,400 litres per day. The Karnataka Dairy Development Corporation was contemplating to expand the capacity of the Farm Cooler at this Unit from 9,400 litres per day to 30,000 litres per day. However, in view of the fact that the existing powder plant at Mandya with a capacity of 10 metric tonnes per day will be ready for commissioning by November/December 1981, the proposed expansion of the chilling capacity of the unit has been dropped.

ಶ್ರೀ ಎಂ. ಎಸ್. ಆತ್ಮಾನಂದ.—ಮಾನ್ಯ ಅಧ್ಯಕ್ಷರೇ, ಉತ್ತರದಲ್ಲಿ ಚಿಲ್ಲಿಂಗ್ ಯೂನಿಟ್ ೯,೪೦೦ ಲೀಟರ್ ಹಾಲಿನ ಸಾಮರ್ಥ್ಯವನ್ನು ಪಡೆದಿದೆ ಎಂದು ತಿಳಿಸಿದ್ದಾರೆ. ಇದನ್ನು ೩೦,೦೦೦ ಲೀಟರುಗಳಿಗೆ ವಿಸ್ತರಿಸುವ ಉದ್ದೇಶವಿದ್ದು ಅದನ್ನು ಕೈಬಿಡಲಾಗಿದೆ ಎಂದು ತಿಳಿಸಿದ್ದಾರೆ. ಇದಕ್ಕೆ ಕಾರಣ ಏನು ಎಂದು ತಿಳಿಸುತ್ತೀರಾ?

ಶ್ರೀ ವೈ. ರಾಮಕೃಷ್ಣ.—ಕಾರಣ ದಿವಸವೊಂದಕ್ಕೆ ೧೦ ಮೆಟ್ರಿಕ್ ಟನ್ ಹಾಲುಪುಡಿ ಮಾಡುವ ಫ್ಯಾಕ್ಟರಿ ಗೆಜ್ಜಲಗೆರೆ ಪಕ್ಕದಲ್ಲಿ ಬರುವುದರಿಂದ ಮತ್ತು ನವೆಂಬರ್‌ನಿಂದ ಕೆಲಸ ಪ್ರಾರಂಭ ಮಾಡುವುದರಿಂದ ಅದರ ಅವಶ್ಯಕತೆ ಇಲ್ಲ ಎಂದು ಕೈಬಿಡಲಾಗಿದೆ.

ಶ್ರೀ ಎಂ. ಎಸ್. ಆತ್ಮಾನಂದ.—ಈ ಒಂದು ಪೌಡರ್ ಪ್ಲಾಂಟ್ ನವೆಂಬರ್ ಹೊತ್ತಿಗೆ ಪ್ರಾರಂಭಿಸಲಾಗುತ್ತದೆ ಎಂದು ತಿಳಿಸುತ್ತಿದ್ದಾರೆ. ಆ ಕಾರ್ಖಾನೆಯಲ್ಲಿ, ಜಮೀನು ಕಳೆದುಕೊಂಡ ಪರಿಗೆ ಮತ್ತು ಸ್ಥಳೀಯರಿಗೆ ಉದ್ಯೋಗದಲ್ಲಿ ಆದ್ಯತೆ ಕೊಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಕೇಳುತ್ತಿದ್ದೇನೆ.

ಶ್ರೀ ವೈ. ರಾಮಕೃಷ್ಣ.—ಅದನ್ನು ಪರಿಶೀಲಿಸುತ್ತೇನೆ.